ಕವಿತೆಗಳನ್ನು ಬರೆಯುವುದರಿಂದಲೂ, ಊರ ಹತ್ತಿರದವನಾದುದರಿಂದಲೂ, ಒಂದೆರಡು ವರ್ಷ ದೊಡ್ಡವನಾದುದರಿಂದಲೂ ಅವರು ನನ್ನೊಡನೆ ಆಗಾಗ ಮಾತಾಡುವುದು, ಸಲಹೆ ಕೇಳುವುದು ನಡೆದಿತ್ತು. ಅವರು ಒಮ್ಮೆಯಾದರೂ 'ಭಾರತೀಯ ಕಾವ್ಯ ಮೀಮಾಂಸೆ' ಓದಬೇಕೆಂದು ನಾನೊಮ್ಮೆ ಹೇಳಿದೆ. ಕವಿತೆಗಳನ್ನು ಬರೆಯಬಯಸುವ ನಾವು ಕಡೆಯ ಪಕ್ಷ ಅಷ್ಟಾದರೂ ಕಾವ್ಯಶಾಸ್ತ್ರದ ಪರಿಚಯ ಇಟ್ಟುಕೊಳ್ಳಬೇಕೆಂದು ನನ್ನ ವಾದ. ಈ ಮಾತನ್ನು ಅನೇಕರಿಗೆ ನಾನು ಹೇಳಿದ್ದೇನೆ. ಬಹುತೇಕ ಯಾರೂ ಓದಿದ ಹಾಗೆ ಕಾಣಲಿಲ್ಲ. ಅದರಿಂದ ನನಗೆ ಅಪ್ರತ್ಯಕ್ಷವಾಗಿ ಪ್ರಯೋಜನವಾಗಿದೆ. ಕಾವ್ಯಮೀಮಾಂಸೆ ಓದುವ ಪ್ರಯಾಸಕ್ಕಿಳಿಯದವರು ಮತ್ತೆ ನನ್ನೊಡನೆ ಸಲಹೆ, ಸೂಚನೆ, ಮುನ್ನುಡಿ ಎಂದು ಬರುವುದಿಲ್ಲ. ರಾನಭ ಅವರಿಗೂ ನನ್ನ ಮಾತಿನಿಂದ ಅಸಮಾಧಾನವೇ ಆಯಿತು. ಶಾಸ್ತ್ರ ಓದಿ ಕವಿತೆ ಬರೆಯುವುದೆಂದರೆ ಯೂಟ್ಯೂಬ್ ನೋಡಿ ಅಡುಗೆ ಮಾಡಿದಂತೆಯೇ ಸರಿ ಎಂದು ಸಾರಾಸಗಟಾಗಿ ನನ್ನ ಸೂಚನೆಯನ್ನು ಅವರು ತಿರಸ್ಕರಿಸಿದರು. 'ಶಾಸ್ತ್ರ ಓದುವ ನೀವು ಆಗಲೇ ನೂರಾರು ಕವಿತೆ ಬರೆದುಬಿಟ್ಟಿರುವುದರಿಂದ ಅಥವಾ ಹಾಗೆ ತಿಳಿದಿರುವುದರಿಂದ ನಿಮ್ಮ ಕಾವ್ಯ ಕರ್ಮದ ಸೂಕ್ಷ್ಮಗಳು ಕಾವ್ಯಮೀಮಾಂಸೆಯ ಅಧ್ಯಯನದಿಂದ ನಿಮಗೇ ಅರಿವಿಗೆ ಬರಬಹುದು' ಎಂದು ಸಮಾಧಾನವಾಗಿಯೇ ನಾನು ಉತ್ತರಿಸಿದೆ. ಆ ವಾಕ್ಯದಲ್ಲಿ ನನ್ನ ತುಟಿ ಮೀರಿ ಇಣುಕಿದ್ದ ವ್ಯಂಗ್ಯ ಕವಿಯ ಮನಸಿನೊಳಗೆ ಹೊಕ್ಕು ತನ್ನ ಕೆಲಸ ಮಾಡಿರಬೇಕು, ಮುಂದೆ ಕವಿ ಕಾವ್ಯಮೀಮಾಂಸೆ ಓದಿರಬೇಕು. ಅದು ತಿಳಿದಿದ್ದು ಒಮ್ಮೆ ಅವರೊಡನೆ ಅವರ ಹಳ್ಳಿಮನೆಯಲ್ಲಿ ಗಪ್ಪ ಹೊಡೆಯುತ್ತ ಕುಳಿತಾಗ. 'ಮಾತೆಂಬ ಜ್ಯೋತಿ ಸಂಸಾರದ ಉದ್ದಕ್ಕೂ ಬೆಳಗದೆ ಇದ್ದರೆ ಅಶೇಷ ಭುವನತ್ರಯವೂ ಕಗ್ಗತ್ತಲಾಗಿಬಿಟ್ಟೀತು' ಎಂಬ ದಂಡಿಯ ಮಾತನ್ನು ಅವರು ನೆನಪಿಸಿಕೊಳ್ಳುತ್ತಾ, 'ಅದು ಸರಿ. ದಟ್ಟ ಕಾನನದ ನಡುವಿನ ಈ ಹಳ್ಳಿಯ ಗಾಢ ಮೌನದಲ್ಲಿ ಬೆಳ್ಳಂಬೆಳಿಗ್ಗೆ ಎದ್ದು ಬರುವ ಹಕ್ಕಿಗಳ ಕಲರವದಿಂದ ಆ ಮಾತು ನನಗೆ ಹೆಚ್ಚು ಮನವರಿಕೆಯಾಗಿದೆ. ಆದರೆ ಅದಿಲ್ಲದ ನಿರಾಕಾರ ಮೌನವೂ ಮಹತ್ವದ್ದೇ ಅಲ್ಲವೇ? ಮಾತಿನ ಅವಲಂಬನವಿಲ್ಲದೆ ವಿಶ್ವ ತನ್ನ ಪಾಡಿಗೆ ತಾನಿರಬಲ್ಲುದು. ನಾವೊಂದು ಮಾತುಗಳ ಕನ್ನಡಿ ಸೃಷ್ಟಿಸಿ ಅದರ ಮಾಯೆಯಲ್ಲಿ ಸಿಕ್ಕುಬಿದ್ದಿದ್ದೇವೆ' ಎಂದರು. ನಾನು ನಕ್ಕೆ. 'ನಿಮಗೆ ಕಾವ್ಯಮೀಮಾಂಸೆ ಒಮ್ಮೆ ಓದಿ ಅಂದಿದ್ದೆ. ಈಗ ನೋಡಿದರೆ ಅದು ನಿಮ್ಮ ರಕ್ತವಾಗಿ ಹರಿಯುತ್ತಿದೆ ಎಂದು ನನಗೆ ತೋರುತ್ತದೆ. ಸಂತೋಷ ಕವಿಗಳೇ' ಅಂದೆ.



ಕವಿಗಳ ಅಬ್ಬೆಯ ಬಗೆಗೆ ಹೆಚ್ಚು ಮಾತು ಹೇಳಲಿಲ್ಲ. ದಣಿವು ಕಾಣದ ಜೀವ ಅದು. ಹೆಸರು ಲಕ್ಷ್ಮಿ. ಇದೇ ಕಾಡ ಸೆರಗಿನ ಅಚವೆ ಅವಳ ಊರು. ತಕ್ಕ ಮಟ್ಟಿಗೆ ಅಕ್ಷರಗಳನ್ನು ಓದಬಲ್ಲಳು. ಯಕ್ಷಗಾನದ ಪದ್ಯಗಳೂ ಸೇರಿ ನೂರಾರು ಹಾಡುಗಳನ್ನು ನೆನಪಿನಿಂದ ಹಾಡಬಲ್ಲಳು. ದೇವರ ಮುಂದೆ ಹೊಗೆ ಹಾರುವ ನೈವೇದ್ಯದ ಬಿಸಿ ಬಿಸಿ ಅಡುಗೆಗಳನ್ನಿರಿಸುತ್ತಾ, ನೈವೇದ್ಯವಾದ ಮೇಲೆ ಆ ನೆಲ ಒರೆಸುತ್ತಾ, ನಂತರ ಭಟ್ಟರಿಗೆ ಆರತಿ ತಟ್ಟೆಗಳನ್ನು ಅಣಿ ಮಾಡಿಕೊಡುತ್ತಾ